## 34

# “ಅವರು ಆತನನ್ನು ಶಿಲುಬೆಗೆ ಹಾಕಿದರು”

## (19:1-42)

ಎಲ್ಲಾ ಸಮಯಗಳಲ್ಲಿ ಅತಿದೊಡ್ಡ ಪ್ರೀತಿಯ ಕಥೆಯು ಯಾವುದು? ಸಿಂಡ್ರಿಲ್ಲಾ, ಸ್ಲೀಪಿಂಗ್ ಬ್ಯೂಟಿ ಇಲ್ಲವೇ ಸ್ನೋವೈಟ್ ಯೆಕ್ಷಿಣಿ ಕಥೆ ಎಂದು ಕೆಲವರು ಯೋಚಿಸಬಹುದು. ಪ್ರತಿಯೊಂದು ಕಥೆಯು ಸುಂದರವಾದ, ಒಳ್ಳೆ ಹೃದಯದ ಕನ್ನಿಕೆಯು ತನ್ನ ಸುಂದರವಾದ ಗಣ್ಯರಾಜಕುಮಾರನಿಂದ ರಕ್ಷಿಸಲ್ಪಡುವದನ್ನೂ ಅವರು “ಅಂದಿನಿಂದ ಸುಖವಾಗಿ ಬಾಳಿದರು” ಎಂದು ಹೇಳುವದನ್ನು ಒಳಗೊಂಡಿರುತ್ತದೆ. ಬಹುಶಃ *ವಿದ್ ದ ವಿಂಡ್* ನಿಮ್ಮ ಮನಸ್ಸು *ರೋಮಿಯೋ ಜೂಲಿಯೇಟ್* ಇಲ್ಲವೇ *ಗೊನ್‌ವುಯ್ತುದವಿಂಡ* ದಂಥಹ ಹೆಚ್ಚು ಪ್ರಬುದ್ಧ ಪ್ರೇಮದ ಕಡೆಗೆ ಹೋಗಬಹುದು.

ಪ್ರೀತಿಯ ಕಥೆಗಳ ಬಗ್ಗೆ ನೀವು ಯೋಚಿಸುವಾಗ, ಒಂದು ಮಗುವಿಗಾಗಿ ತಂದೆ ತಾಯಿಗಳ ಪ್ರೀತಿಯ ಕಥೆಗಳನ್ನು ನೀವು ಯೋಚಿಸಬಹುದು. ತನ್ನ ಚಿಕ್ಕ ಮಗನೊಂದಿಗೆ ಕಠಿಣ ಚಳಿಗಾಲದ ಬಿರುಗಾಳಿಯಲ್ಲಿ ಸಿಕ್ಕಿಕೊಂಡ ಒಬ್ಬ ರೈತ ತಾಯಿಯ ಕಥೆಯು ಕೊರಿಯಾದೊಳಗಿಂದ ಬರುತ್ತದೆ. ತನ್ನ ಚಿಕ್ಕ ಮಗುವನ್ನು ಉಳಿಸುವದಕ್ಕಾಗಿ ಪ್ರಯತ್ನಿಸುವಲ್ಲಿ ತನ್ನ ಭಾರವಾದ ವುಲನ್ ಬಟ್ಟೆಗಳನ್ನೆಲ್ಲಾ ತೆಗೆದು ಆ ಮಗುವಿಗೆ ಸುತ್ತಿದಳು. ಮರುದಿನ ಮುಂಜಾನೆ ಹೆಪ್ಪುಗಟ್ಟಿದ ಆಕೆಯ ದೇಹವು ಕಂಡು ಹಿಡಯಲ್ಪಟ್ಟಿತು ಮತ್ತು ಆಕೆಯ ಪಕ್ಕದಲ್ಲಿದ್ದ ಸುತ್ತಿದ್ದ ಬಟ್ಟೆಯಲ್ಲಿ ಮಗು ಅಳುವುದು ಕೇಳಿಸಿತು. ಅದು ಸುರಕ್ಷಿತವಾಗಿ ಬೆಚ್ಚಗೆ ಇಡಲ್ಪಟ್ಟಿತ್ತು. ಆ ಮಗನು ಬೆಳದಂತೆ ಆಗಾಗ ಅವನಿಗೆ ಅವನ ತಾಯಿಯ ಪ್ರೀತಿ ಮತ್ತು ತ್ಯಾಗದ ಬಗ್ಗೆ ಹೇಳಲ್ಪಡುತಿತ್ತು. ಒಂದು ಛಳಿಯುಳ್ಳ, ಛಳಿಗಾಲದ ದಿನ ಅವನು ಅವನ ತಾಯಿಯ ಸಮಾಧಿಯ ಬಳಿಯಲ್ಲಿ ಕಂಡು ಕೊಳ್ಳಲ್ಪಟ್ಟನು. ಅವನು ಕೋಟು ಶರ್ಟುಗಳು ಇಲ್ಲದೇ ಇದ್ದನು. “ಅಮ್ಮಾ, ನನ್ನ ನಿಮಿತ್ತವಾಗಿ ಹೀಗೆ ನೀನು ಛಳಿಯನ್ನು ಅನುಭವಸಿದೆಯೋ?” ಎಂದು ಮೇಲಿಂದ ಮೇಲೆ ಕೇಳುತ್ತಿದ್ದು.

ಪ್ರೀತಿಯ ಮಹಾ ಪ್ರದರ್ಶನಗಳಂತೆ ಇಂಥ ಕಥೆಗಳ ನಮ್ಮ ಹೃದಯಗಳನ್ನು ತಟ್ಟುತ್ತವೆ. ಹೀಗಿದ್ದರೂ, ಎಲ್ಲಾ ಸಮಯಗಳ ಅತ್ಯಂತ ಮಹಾ ಪ್ರೀತಿಯ ಕಥೆಯು ನಿಶ್ಚಯವಾಗಿ ಯೋಹಾನ 19ರಿಂದ ಬರುತ್ತದೆ. ಅದು ನಮ್ಮ ದೇವರು ನಮ್ಮನ್ನು ಎಷ್ಟು ಪ್ರೀತಿಸುತ್ತಾನೆ ಎಂಬುದರ ಬಗೆಗಿನ ಕಥೆಯಾಗಿದೆ, ಅದು ಶಿಲುಬೆಯ ಕಥೆಯಾಗಿರುತ್ತದೆ.

### ಪ್ರೀತಿಯ ಒಂದು ಕಥೆಯಂತೆ ಶಿಲುಬೆ

ಒಂದು ಪ್ರೀತಿಯ ಕಥೆಯಂತೆ ಶಿಲುಬೆಯ ಬಗ್ಗೆ ಮಾತಾಡುವುದು ಹೊಸ ಸಂಗತಿಯಾಗಿರುವದಿಲ್ಲ. ಹಲವಾರು ಸಲ ಯೋಹಾನನು ಶಿಲುಬೆಯು ದೇವರ ಪ್ರೀತಿಯ ಅಂತಿಮ ಪ್ರದರ್ಶನವಾಗಿದೆಯೆಂದು ಸೂಚಿಸಿದ್ದಾನೆ:

> “ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು” (3:16).

ಪಸ್ಕ ಹಬ್ಬದ ಮುಂದೆ ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ

> ಹೋಗಬೇಕಾದ ಕಾಲ ಬಂತೆಂದು ತಿಳುದುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು (13:1).

> "ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಸಬೇಕೆಂಬದೇ ನಾನು ಕೊಡುವ ಆಜ್ಞೆಯಾಗಿದೆ. ಪ್ರಾಣವನ್ನೆ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ" (15:12, 13).

ಶಿಲುಬೆಯನ್ನು ಕುರಿತು ಹಲವಾರು ವಿವರಣೆಗಳನ್ನು ಕೊಡಬಹುದು. ಯೋಹಾನನ ಸುವಾರ್ತೆಯಲ್ಲಿ ಪ್ರಾಮುಖ್ಯತೆ ಕೊಡಲ್ಪಟ್ಟಿದ್ದು, ಶಿಲುಬೆಯು ದೇವರ ಪ್ರೀತಿಯ ಅಂತಿಮ ಪ್ರದರ್ಶನವಾಗಿತ್ತು ಎಂಬುದು.

ಅನ್ನ, ಕಾಯಫ ಮತ್ತು ಪಿಲಾತನ ಎದುರಿನಲ್ಲಿಯ ಯೇಸುವಿನ ನ್ಯಾಯವಿಚಾರಣೆಯ ನಂತರ, ಯೇಸುವು ಶಿಲುಬೆ ಹಾಕಲ್ಪಡಲು ಯೆಹೂದ್ಯರಿಗೆ ಒಪ್ಪಿಸಿ ಕೊಡಲ್ಪಟ್ಟನು. ಶಿಲುಬೆಯು ಕ್ರೈಸ್ತ ವಿಶ್ವಾಸದ ಮೂಲೆಗಲ್ಲಾಗಿದ್ದರೂ, ನಿಜವಾದ ಘಟನೆಯು ಕೆಲವೇ ಮಾತುಗಳಲ್ಲಿ ದಾಖಲಿಸಲ್ಪಟ್ಟಿದೆ.

> ಅವರು ಯೇಸುವನ್ನು ತೆಗೆದುಕೊಂಡು ಹೋದರು; ಆತನು ತನ್ನ ಶಿಲುಬೆಯನ್ನು ತಾನೇ ಹೊತ್ತು ಕೊಂಡು ಕಪಾಲಸ್ಥಳವೆಂಬ ಸ್ಥಾನಕ್ಕೆ ಹೋದನು. ಇದಕ್ಕೆ ಇಬ್ರಿಯ ಮಾತಿನಲ್ಲಿ ಗೊಲ್ಗೊಥಾ ಎಂದು ಹೆಸರು. ಅಲ್ಲಿ ಆತನನ್ನು ಆತನ ಸಂಗಡ ಇನ್ನಿಬ್ಬರನ್ನೂ ಶಿಲುಬೆಗೆ ಹಾಕಿದರು; ಅವರಲ್ಲಿ ಆ ಕಡೆ ಒಬ್ಬನನ್ನು ಈ ಕಡೆ ಒಬ್ಬನನ್ನು ನಡುವೆ ಯೇಸುವನ್ನು ಇಟ್ಟರು (19:17, 18).

ನಿಜವಾಗಿಯೂ, ನಾಲ್ಕು ಸುವಾರ್ತಾ ಬರಹಗಾರರಲ್ಲಿ ಯಾರೂ ಯೇಸುವಿನ ಬಗ್ಗೆ ಅನೇಕ ಪ್ರಾಕೃತಿಕ ವಿವರಗಳನ್ನು ಕೊಟ್ಟಿರುವದಿಲ್ಲ. "ಅಲ್ಲಿ ಅವರು ಆತನನ್ನು ಶಿಲುಬೆಗೆ ಹಾಕಿದರು" ಎಂಬ ಸರಳವಾದ ಪದಗಳು ಅದ್ಭುತಕರವಾದ ಅರ್ಥವನ್ನು ಕೊಡುತ್ತದೆ. ಯೇಸುವು ದೇವರ ಕುಮಾರನಾಗಿದ್ದಾನೆ ಎಂದು ನಂಬುವವನು (ಅಲ್ಲಿ ಪುನಃ ಆ ಪದವಿರುತ್ತದೆ) ಆಳವಾಗಿ ತಟ್ಟಲ್ಪಡದೇ ಅವುಗಳನ್ನು ಓದಲಾರನು. "ಅಲ್ಲಿ ಅವರು ಆತನನ್ನು ಶಿಲುಬೆಗೆ ಹಾಕಿದರು" ಎಂಬ ಯೋಹಾನನ ಹೇಳಿಕೆಯ ಬಲವು ಅಂಥದ್ದಾಗಿರುತ್ತದೆ.

ಅನಂತರ, ಯೇಸುವಿನ ತಲೆಯ ಮೇಲೆ ಒಂದು ಸಂಕೇತವನ್ನು ಇಡಬೇಕೆಂದು ಹೇಗೆ ಪಿಲಾತನು ಅಪ್ಪಣೆಕೊಟ್ಟನು ಎಂಬುದನ್ನು ಯೋಹಾನನು ಹೇಳಿದನು. ಅದು ಹೀಗಿತ್ತು: **"ನಜರೇತಿನ ಯೇಸು, ಯೆಹೂದ್ಯರ ಅರಸನು"** (19:19). ಈ ಆಶ್ಚರ್ಯಕರವಾದ ಹೇಳಿಕೆಯು ಹಿಬ್ರುವಿನಲ್ಲಿ (ಯೆಹೂದ್ಯರ ಭಾಷೆ), ಲ್ಯಾಟಿನ್‌ನಲ್ಲಿ (ರೋಮನ್‌ರ ಭಾಷೆ) ಮತ್ತು ಗ್ರೀಕ್‌ನಲ್ಲಿ (ಆ ದಿನದ ಸಾಮಾನ್ಯ ವ್ಯಾಪಾರದ ಭಾಷೆ) ಬರೆಯಲ್ಪಟ್ಟಿತ್ತು. ಆದರೆ ಇದು ಯೇಸುವಿನ ಮರಣಕ್ಕೆ ಕಾರಣರಾದ ಮಹಾಯಾಜಕರಿಗೆ ಭಯಂಕರವಾಗಿ ಅಪರಾಧವಾಗಿತ್ತು. ಸೂಚಕ ಫಲವು, "ಈ ಮನುಷ್ಯನು ತಾನು ಯೆಹೂದ್ಯರ ಅರಸನಾಗಿದ್ದೇನೆಂದು ಹೇಳುತ್ತಾನೆ" ಎಂದಿರಬೇಕೆಂದು ಅವರು ನಿರೀಕ್ಷಿಸಿದರು ಆದರೆ ಪಿಲಾತನು ತನ್ನ ಮನಸ್ಸಿಗೆ ಬಂದರೀತಿಯಲ್ಲಿ, "ನಾನು ಬರೆದದ್ದು ಬರೆದಾಯಿತು" (19:22) ಎಂದು ಹೇಳಿದನು.

ಶಿಲುಬೆಯ ಮೇಲೆ ಹಾಕಲ್ಪಟ್ಟ ಸಂಕೇತವು ಯೋಹಾನನ ಸುವಾರ್ತೆಯಲ್ಲಿ ತಾನು ನಿಜವಾಗಿಯೂ ತಿಳಿದು ಕೊಂಡದ್ದಕ್ಕಿಂತ ಹೆಚ್ಚಾದದ್ದನ್ನು ಒಬ್ಬನ ಇನ್ನೊಂದು ಉದಾಹರಣೆಯಾಗಿರುತ್ತದೆ. ಇದನ್ನು ನಾವು ಮೊದಲು ಕಾಯಫನು ಯೆಹೂದ್ಯರ ಆಡಳಿತಾ ಮಂಡಳಿಗೆ ಹೀಗೆ ಹೇಳಿದ್ದರಲ್ಲಿ ನೋಡುತ್ತೇವೆ. "ನಿಮಗೇನೂ ತಿಳಿಯುವದಿಲ್ಲ, ಜನವೆಲ್ಲಾ ನಾಶವಾಗುವದಕ್ಕಿಂತ ಒಬ್ಬ ಮನುಷ್ಯನು ಜನಕ್ಕೋಸ್ಕರ ಸಾಯುವುದು ನಿಮಗೆ ಹಿತವೆಂದು ನೀವು

ಆಲೋಚಿಸುವದೂ ಇಲ್ಲ" (11:49, 50) ಯೋಹಾನನು ವಿವರಿಸುತ್ತ ಮುಂದೆ ಹೋದನು,

> ಇದನ್ನು ಅವನು ತನ್ನಷ್ಟಕ್ಕೆ ತಾನೇ ಹೇಳಲಿಲ್ಲ; ಆದರೆ ತಾನು ಆ ವರುಷದ ಮಹಾಯಾಜಕನಾಗಿದುದ್ದರಿಂದ ದೇವಪ್ರೇರಣೆಯಿಂದ ಮಾತಾಡಿ ಯೇಸು ಆ ಜನಕ್ಕೋಸ್ಕರ ಸಾಯುವದಕ್ಕಿದ್ದನೆಂದು ಹೇಳಿದನು. ಯೇಸು ಆ ಜನಕ್ಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವದಕ್ಕೆ ಸಹ ಸಾಯುವದಕ್ಕಿದ್ದನು (11:51, 52).

ಅದೇ ರೀತಿಯಲ್ಲಿ, ಶಿಲುಬೆಯ ಮೇಲೆ ಯೇಸುವಿನ ತಲೆಯ ಮೇಲೆ ಸಂಕೇತವನ್ನು ಇಡಲು ಪಿಲಾತನು ಅಪ್ಪಣೆಕೊಟ್ಟಾಗ ಅವನು ಗ್ರಹಿಸಿದ್ದಕ್ಕಿಂತ ಎಷ್ಟೋ ಹೆಚ್ಚು ಮಹತ್ವವುಳ್ಳ ಅಗಾಧವಾದ ಸತ್ಯವನ್ನು ಮಾತಾಡಿದನು.

ಯೇಸುವನ್ನು ಶಿಲುಬೆಗೆ ಹಾಕುವ ಆಜ್ಞೆಯನ್ನು ಕೈಕೊಂಡ ಸಿಪಾಯಿಗಳಿಗೆ ಭಯಂಕರವಾದ ಆದರೆ ಬೇಸರತರಿಸುವ ಕಾರ್ಯಮಾಡಬೇಕಾಗಿತ್ತು. ಒಮ್ಮೆ ಒಬ್ಬ ವ್ಯಕ್ತಿಯು ಶಿಲುಬೆಗೆ ಹಾಕಲ್ಪಟ್ಟ ಮೇಲೆ ಮತ್ತು ಶಿಲುಬೆಯು ನಿಲ್ಲಿಸಲ್ಪಟ್ಟ ಮೇಲೆ, ಅಲ್ಲಿ ಮಾಡಲಿಕ್ಕೆ ಏನೂ ಇರುವದಿಲ್ಲ ಆದರೆ ಪಸ್ಕದಲ್ಲಿ ನಿಂತು ಕೊಂಡು ಆ ವ್ಯಕ್ತಿಯು ಸಾಯುವದಕ್ಕಾಗಿ ಕಾದುಕೊಂಡಿರ ಬೇಕಾಗಿತ್ತು. ಸಮಯ ಕಳೆಯಲು ಮತ್ತು ಪ್ರತ್ಯೇಕ ಹಣ ಹೊಂದಿಕೊಳ್ಳಲು, ಅವರು ಕ್ರೋಜೆಗೆ ಹಾಕಲ್ಪಡುವ ಮನುಷ್ಯನ ಬಟ್ಟೆಗಳನ್ನು ಹಂಚಿಕೊಳ್ಳುತ್ತಿದ್ದರು. ಇದನ್ನು ಅವರು ಯೇಸುವಿನ ಬಟ್ಟೆಗಳಿಗೂ ಮಾಡಿದರು. ಅವುಗಳನ್ನು ನಾಲ್ಕು ಭಾಗವಾಗಿ ಮಾಡಿಕೊಂಡರು ಮತ್ತು ಆತನು ಧರಿಸಿದ್ದ ಹೊಲಿಗೆಯಿಲ್ಲದ ಒಳಂಗಿಗಾಗಿ ಚೀಟು ಹಾಕಿದರು.

ಶಿಲುಬೆಗೆ ಹಾಕುವುದು ಕೇವಲ ಮರಣ ಶಿಕ್ಷೆ ವಿಧಿಸುವ ವಿಧಾನವಾಗಿರಲಿಲ್ಲ; ಅದು ಅಂತಿಮವಾಗಿ ಅಪಮಾನ ಪಡಿಸುವ ಹಾಗೂ ನಾಚಿಕೆಗೀಡು ಮಾಡುವ ಸಾಧನವಾಗಿತ್ತು. ಅದು ಹೆಚ್ಚಾಗಿ ಯಾವಾಗಲೂ ಜನರು ದಾಟಿ ಹೋಗುವ ಮತ್ತು ಅಸಹ್ಯಕರವಾದ ನೋಟವನ್ನು ನೋಡುವ ಬಹಿರಂಗ ಸ್ಥಳದಲ್ಲಿ ಮಾಡಲ್ಪಡುತ್ತಿತ್ತು. ಇದನ್ನು ಮಾಡುವಲ್ಲಿ ರೋಮನ್ನರ ಉದ್ದೇಶವು ಸಾಯುತ್ತಿರುವ ಮನುಷ್ಯನ ಅಪರಾಧವ ಇಲ್ಲವೇ ಅವನು ಪ್ರತಿನಿಧಿಸುತ್ತಿದ್ದ ಕಾರಣವು ಏನೇ ಇದ್ದರೂ ಅವನನ್ನು ಅಪಮಾನಗೊಳಿಸುವದಾಗಿತ್ತು. ರೋಮನ್ ನಾಗರೀಕರು ಶಿಲುಬೆಗೆ ಹಾಕಲ್ಪಡುತ್ತಿರಲಿಲ್ಲ; ಈ ರೀತಿಯ ಮರಣ ಶಿಕ್ಷೆಯು ಗುಲಾಮರಿಗೆ, ವಿದೇಶಿಯರಿಗೆ ಮತ್ತು ಕೀಳುಮಟ್ಟದ ಜನರಿಗೆ ಮೀಸಲಾಗಿಡಲ್ಪಟ್ಟಿತ್ತು. ಹೆಚ್ಚಾಗಿ ಅವರು ನಗ್ನರಾಗಿ ಮಾಡಲ್ಪಟ್ಟು ಶಿಲುಬೆಗೆ ಹಾಕಲ್ಪಡುತ್ತಿದ್ದರು. ಮತ್ತು ಅವರ ದೇಹಗಳು ಕೊಳಯಲ್ಪಡುವದಕ್ಕಾಗಿ ವಾರಗಳವರೆಗೆ ಶಿಲುಬೆಯ ಮೇಲೆ ಬಿಡಲ್ಪಡುತ್ತಿದ್ದವು. ಹೀಗೆ ದೃಶ್ಯವು ಹೇಸಿಗೆ ಬರುವಂತೆ ಮಾಡಲ್ಪಡುತಿತ್ತು. ಸಿಪಾಯಿಗಳು ಯೇಸುವಿನ ಬಟ್ಟೆಗಳನ್ನು ಹಂಚಿಕೊಂಡರೆಂದು ಯೋಹಾನನು ದಾಖಲೆ ಮಾಡಿದಾಗ, ಶಿಲುಬೆಗೆ ಹಾಕುವದರಿಂದ ಉದ್ದೇಶಿಸಲ್ಪಟ್ಟ ನಾಚಿಕೆ ಪಡಿಸುವ ಅವಮಾನವನ್ನು ಅವನು ನಮ್ಮ ಜ್ಞಾಪಕಕ್ಕೆ ತಂದಿದ್ದಾನೆ. ಯೇಸುವು ನಮ್ಮೆಲ್ಲರಿಗಾಗಿ ಅವಮಾನವನ್ನು ಸಹಿಸಿಕೊಂಡನು!

ಯೋಹಾನನ ವೃತ್ತಾಂತವು ಅನಂತರ ಶಿಲುಬೆಯ ಬಳಿಯಲ್ಲಿ ನಿಂತು ಕೊಂಡಿದ್ದ ಮಹಿಳೆಯರ ಕಡೆಗೆ ಗಮನವನ್ನು ಸೆಳೆಯುತ್ತದೆ. ಒಬ್ಬಳು ಯೇಸುವಿನ ತಾಯಿ ಮರಿಯಳು ತನ್ನ ಮಗನು ಅಂಥ ಸಾವನ್ನು ಸಾಯುವದನ್ನು ನೋಡುವಂತೆ ಒಬ್ಬ ತಾಯಿಯ ಹೃದಯದಲ್ಲಿ ಆಗುವ ನೋವನ್ನು ಕಲ್ಪಿಸಿಕೊಳ್ಳುವುದೂ ಕಠಿಣವಾದದ್ದಾಗಿದೆ. ಹೀಗಿದ್ದರೂ ತನ್ನ ಶ್ರಮೆಯಲ್ಲಿ ಯೇಸುವು ತನ್ನ ತಾಯಿಯ ಅಗತ್ಯತೆಗಳನ್ನು ನೋಡಲು ಮತ್ತು ಸೇವೆ ಮಾಡಲು ಶಕ್ತನಾದನು. ಯೋಸೇಫನು ಯೇಸು ಯುವಕನಾಗಿದ್ದಾಗ ತೀರಿ ಹೋಗಿದ್ದರಿಂದ, ಈಗ ತಾನು ಹೊರಟು ಹೋದ ಮೇಲೆ ಮರಿಯಳು ತನ್ನ ಜೋಪಾಸನೆ ಮಾಡಿಕೊಳ್ಳುವುದು ಕಠಿಣವಾದದ್ದಾಗುವದೆಂದು ಯೇಸು ತಿಳಿದಿದ್ದನು. ಆತನು ಶಿಲುಬೆಯಿಂದ ಕೆಳಗೆ ನೋಡಿದಾಗ, ಯೇಸುವು "ತಾನು ಪ್ರೀತಿಸಿದ ಶಿಷ್ಯನನ್ನು"

(ಯೋಹಾನನನ್ನು) ನೋಡಿದನು ಮತ್ತು ತನ್ನ ತಾಯಿಗೆ, "ಅಮ್ಮಾ, ಇಗೋ ನಿನ್ನ ಮಗನು" ಎಂದು ಹೇಳಿದನು (19:26). ಆಮೇಲೆ ಆತನು ಯೋಹಾನನಿಗೆ. "ಇಗೋ, ನಿನ್ನ ತಾಯಿ" ಎಂದು ಹೇಳಿದನು (19:27). ಆತನ ಅರ್ಥವೇನೆಂದು ಇಬ್ಬರೂ ತಿಳಿದಿದ್ದರು; ಯೋಹಾನನು ತನ್ನ ಸ್ವಂತ ತಾಯಿಯಂತೆ ಮರಿಯಳು ಜವಾಬ್ದಾರಿಕೆಯನ್ನು ಹೊತ್ತು ಕೊಳ್ಳಬೇಕಾಗಿತ್ತು. ಮತ್ತು ಆ ದಿನದಿಂದ ಮರಿಯಳು ಯೋಹಾನನ ಮನೆಯಲ್ಲಿ ವಾಸಿಸಲಿಕ್ಕೆ ಹೋದಳು.

ಮರಿಯಳು ಮತ್ತು ಯೋಹಾನನಿಗೆ ಆತನ ಮಾತುಗಳು ಯೇಸುವಿನ ಪ್ರೀತಿಯ ಬಲವನ್ನು ಶುದ್ಧತೆಯನ್ನೂ ಸೂಚಿಸುತ್ತವೆ. ಶ್ರಮೆಯು ನಮ್ಮನ್ನು ಸ್ವಾರ್ಥಿಗಳನ್ನಾಗಿ ಮಾಡುತ್ತದೆ. ನಾವು ನೋವನ್ನು ಅನುಭವಿಸುವಾಗ, ಬೇರೆ ಯಾರ ಬಗೆಗಾದರೂ ಯಾವುದರ ಬಗೆಗಾದರೂ ಯೋಚಿಸುವುದು ಕಷ್ಟಕರವಾದದ್ದಾಗುತ್ತದೆ. ಯೇಸುವು ಶಿಲಬೆಯ ಮೇಲೆ ಸಾಯುತ್ತಿರುವಾಗ ತನ್ನ ತಾಯಿಯ ಅಗತ್ಯತೆಗಳನ್ನು ಯೇಸುವು ಪೂರೈಸಿದ್ದು ಎಲ್ಲಕ್ಕಿಂತ ಹೆಚ್ಚಾಗಿ ಗಮನಾರ್ಹ ವಾದದ್ದಾಗಿದೆ.

ಈ ಘಟನೆಗಳ ನಂತರ, ಶಿಲುಬೆಯ ಕಥೆಯು ಬೇಗನೇ ಅಂತ್ಯಕ್ಕೆ ಬರುತ್ತದೆ. ಯೇಸುವು ತನ್ನ ಕರ್ತವ್ಯವನ್ನು ತೀರಿಸಿದ್ದೇನೆಂದು ತಿಳಿದು ಕೊಂಡಿದ್ದನು. ಆಗ ಯೇಸು "ನನಗೆ ನೀರಡಿಕೆ ಆಗಿದೆ" ಎಂದು ಹೇಳಿದನು (19:28). ಮತ್ತು ಆಗ ಯಾರೋ ಒಬ್ಬನು ಸ್ಪಂಜನ್ನು ಹುಳಿ ರಸದಿಂದ ತುಂಬಿಸಿ ಆತನಿಗೆ ಕೊಟ್ಟನು. ಮತ್ತೊಮ್ಮೆ, ಈ ಸುವಾರ್ತೆಯಲ್ಲಿ ಬಹಳ ಸಲ ನೋಡಿದಂತೆ, ಯೇಸುವಿನ ಮಾನವತೆಯು ಒತ್ತಿ ಹೇಳಲ್ಪಟ್ಟಿದೆ ಹಸಿವೆಯಿಂದಿರುವುದು, ದಣಿಯುವುದು ಏನೆಂಬುದನ್ನು ಆತನು ತಿಳಿದಿದ್ದನು (4:6). ಮತ್ತು ಆತ್ಮದಲ್ಲಿ ನೊಂದು ಕೊಳ್ಳು ವದನ್ನು ಬಲ್ಲವನಾಗಿದ್ದನು (11:33). ಯೇಸುವು ನಮ್ಮ ಮಾನವತೆಯನ್ನು ಸಂಪೂರ್ಣವಾಗಿ ಅರ್ಥಮಾಡಿ ಕೊಳ್ಳುತ್ತಾನೆ, ಮತ್ತು "ನನಗೆ ನೀರಡಿಕೆ ಆಗಿದೆ" ಎಂದು ಆತನು ಸಾಯುವ ಮೊದಲು ಹೇಳಿದಾಗ ಆತನು ಅದನ್ನು ಉದಾಹರಿಸಿದನು.

ಆಗ ಯೇಸು ಶಿಲುಬೆಯಿಂದ ತನ್ನ ಕೊನೆಗೆ ಮಾತನ್ನು ಹೇಳಿದನು: "ತೀರಿತು" (19:30). ಆಮೇಲೆ "ಆತನು ತನ್ನ ತಲೆ ಬಾಗಿಸಿ ಆತ್ಮವನ್ನು ಒಪ್ಪಿಸಿಕೊಟ್ಟನು" ತನ್ನ ಜೀವಿತಕ್ಕಾಗಿ ಆತನು ಒಂದು ಯೋಜನೆಯನ್ನು ಅನುಸರಿಸಿದ್ದನು, ಮತ್ತು ಕೊನೆಗೆ ಆತನು ಅದನ್ನು ಪೂರೈಸಿದನು. ಆತನ ಮರಣವು ಆಕಸ್ಮಿಕವಾದದ್ದಲ್ಲ. ನಮ್ಮ ಪಾಪಗಳ ಕ್ಷಮಾಪಣೆಗಾಗಿ ದೇವರ ಯೋಜನೆ ಗನುಗುಣವಾಗಿ ಆತನು ತನ್ನ ಪ್ರಾಣವನ್ನು ಕೊಟ್ಟನು!

## ತೀರ್ಮಾನಿಸಲಿಕ್ಕೆ ಒಂದು ಕರೆಯಂತೆ ಶಿಲುಬೆ

ಶಿಲುಬೆಯ ಮೇಲೆ ಯೇಸುವಿನ ಮರಣದ ಕಥೆಯಿಂದ ನಾವು ಏನನ್ನು ಮಾಡಬೇಕು? ನಾವು ಕೆಟ್ಟದ್ದಾಗಿ ಭಾವಿಸಬೇಕಾಗಿರುವುದೋ? ನಾವು ಸಂತೋಷಪಡಬೇಕೋ? ನಾವು ಏನನ್ನಾದರೂ ಮಾಡುವ ಅಗತ್ಯತೆ ಇರುವುದೋ?

ಯೋಹಾನನ ಸುವಾರ್ತೆಯಲೆಲ್ಲಾ, ಜನರು ಗಮನಿಸಿದಂತೆ, ಕೇಳಿಸಿಕೊಂಡತೆ ಮತ್ತು ಯೇಸುವಿನೊಂದಿಗೆ ಪರಸ್ಪರ ವರ್ತಿಸಿದಂತೆ ಕಥೆಗಳಲ್ಲಿ ಪ್ರವೇಶಿಸಲು ನಾವು ಆಮಂತ್ರಿಸಲ್ಪ ಟ್ಟಿವೆ. ಇವು ಕೇವಲ ಅವರ ಕಥೆಗಳಾಗಿರಬೇಕೆಂದು ಎಂದೂ ಉದ್ದೇಶಿಸಲ್ಪಟ್ಟಿರಲಿಲ್ಲ; ಅವು ನಮ್ಮ ಕಥೆಗಳೂ ಸಹ ಆಗಿರುತ್ತವೆ. ಈ ಸುವಾರ್ತೆಯು ಯೇಸುವಿನಲ್ಲಿ ಅವರ ನಂಬಿಕೆಯ ಬಗೆಗೆ ಮಾತ್ರವೇ ಇರುವದಿಲ್ಲ; ಅದು ನಮ್ಮ ನಂಬಿಕೆಯ ಬಗೆಗೂ ಇರುತ್ತದೆ. ಯೇಸುವಿನ ಮರಣವನ್ನು ವಿವರಿಸಿದ ನಂತರ ಕೂಡಲೇ ಯೋಹಾನನು ನಮಗೆ ಇದನ್ನು ಜ್ಞಾಪಕಕ್ಕೆ ತಂದನು. "ಅದನ್ನು ಕಂಡವನೇ ಸಾಕ್ಷಿ ಹೇಳಿದ್ದಾನೆ, ಅವನ ಸಾಕ್ಷಿ ಸತ್ಯವೇ. ತಾನು ಹೇಳುವುದು ಸತ್ಯವೆಂದು ಅವನು ಬಲ್ಲನು; ನೀವು ಸಹ ನಂಬಬೇಕೆಂದು ಇದನ್ನು ಹೇಳಿದ್ದಾನೆ" (19:35). ಪುನಃ ನಾವು "ನಂಬಿಕೆಯ" ಪ್ರಶ್ನೆಯನ್ನು ನೋಡುತ್ತೇವೆ. ಒತ್ತಡದಲ್ಲಿ ಸಿಕ್ಕಿಕೊಂಡವರ ಉದಾಹರಣೆಗಳಂತೆ ಯೋಹಾನನು ನಮಗೆ ಪೇತ್ರನ ಮತ್ತು ಪಿಲಾತನ ವಿವರಗಳನ್ನು ಕೊಟ್ಟನು. ಅದಕ್ಕೆ ವಿರುದ್ಧವಾಗಿ,

ಆತನ ಮರಣದ ನಂತರ ಕೂಡಲೇ ಯೇಸುವಿನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡಲಿಕ್ಕೆ ಧೈರ್ಯವುಳ್ಳ ಇಬ್ಬರ ಉದಾಹರಣೆಗಳನ್ನು ಅವನು ಒದಗಿಸಿದನು.

ಅರಿಮಥಾಯದ ಯೋಸೇಫನು ಯೇಸುವಿನ ಶಿಷ್ಯನಾಗಿದ್ದನು, ಆದರೆ ಅವನು ಯೆಹೂದಿ ನಾಯಕರಿಗೆ ಭಯಪಟ್ಟದ್ದರಿಂದ ಅವನು ರಹಸ್ಯ ಶಿಷ್ಯನಾಗಿದ್ದನು. ಯೇಸುವು ಮರಣ ಹೊಂದಿದಾಗ, ಯೋಸೇಫನು ಪಿಲಾತನ ಬಳಿಗೆ ಹೋದನು ಮತ್ತು ತಾನು ಹೂಣಿಡಲಿಕ್ಕಾಗುವಂತೆ ಆತನ ದೇಹವನ್ನು ಕೇಳಿಕೊಂಡನು. ಯೇಸುವಿನ ಹಿಂಬಾಲಕನಂತೆ ಗುರುತಿಸಲ್ಪಡಲು ಭಯಗೊಂಡಿದ್ದವನ, ನಿಶ್ಚಯವಾಗಿಯೂ "ರಹಸ್ಯ"ವಾದ ಕೃತ್ಯವಾಗಿರಲಿಲ್ಲ![1]

ಯೇಸುವಿನ ದೇಹವನ್ನು ಹೂಣಿಡುವ ಭಯವಿಲ್ಲದ ಕೃತ್ಯದಲ್ಲಿ ಯೋಸೇಫನ ಸಹಭಾಗಿಯು ಬೇರೆ ಯಾರೂ ಅಲ್ಲದೇ "ಮೊದಲ ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದಿದ್ದ" ನಿಕೊದೇಮನು ಆಗಿದ್ದನು (19:39). ಅಧ್ಯಾಯ 3ರಲ್ಲಿ, ಯೇಸುವು ಅವನಿಗೆ ಹೊಸದಾಗಿ ಹುಟ್ಟುವದರ ಬಗ್ಗೆ ಹೇಳಿದಾಗ ಅವನನ್ನು ನೋಡುತ್ತೇವೆ. ಅವನನ್ನು ನಾವು ಪುನಃ 7:50-52ರಲ್ಲಿ ಅವನು ತನ್ನ ನಂಬಿಕೆಯ ಬಗ್ಗೆ ಇನ್ನೂ "ಬಹಿರಂಗವಾಗಿರದೇ" ಇದ್ದಾಗ ನೋಡುತ್ತೇವೆ. ಹೀಗಿದ್ದರೂ ಈ ಸಮಯದಲ್ಲಿ, ಮಾನವ ಚರಿತ್ರೆಯ ಅತೀ ಅಂಧಕಾರದ ತಾಸುಗಳಲ್ಲಿ ಅವನನ್ನು ನೋಡುತ್ತೇವೆ. ಅದು ಯೇಸುವಿನ ಮರಣ ಮತ್ತು ಪುನರುತ್ಥಾನದ ಮಧ್ಯದಲ್ಲಿಯ ಸಮಯ ವಾಗಿತ್ತು. ಇಲ್ಲಿ ಅವನು ಧೈರ್ಯದ, ನಿರ್ಧರಿಸಿದ, ಸಾಹಸದ ವಿಶ್ವಾಸವನ್ನು ಪ್ರದರ್ಶಿಸಿದನು. ಯೋಸೇಫ ಮತ್ತು ನಿಕೊದೇಮ ಇಬ್ಬರೂ ಕೂಡಿ ಯೇಸುವಿನ ದೇಹವನ್ನು ಹೂಣಿಡುವದಕ್ಕಾಗಿ ಮತ್ತು ಅದನ್ನು ಸಮಾಧಿಯಲ್ಲಿ ಇಡುವದಕ್ಕಾಗಿ ಸಿದ್ಧಪಡಿಸಿದರು.

## ಮುಕ್ತಾಯ

ಯೇಸುವಿನ ಕಥೆಯು ನಿಷ್ಕ್ರಿಯವಾದ ಮನೋರಂಜನೆಯನ್ನು ಒದಗಿಸಲು ಹೇಳಲ್ಪಟ್ಟಿರುವದಿಲ್ಲ, ಅದನ್ನು ಕೇಳುವವರ ಹೃದಯಗಳಲ್ಲಿ ಸಜೀವವಾದ, ಜೀವನ ಬದಲಾಯಿಸುವ ನಂಬಿಕೆಯನ್ನು ಹುಟ್ಟಿಸಲು ಬರೆಯಲ್ಪಟ್ಟಿದೆ. ಶಿಲುಬೆಯ ನಾವು ಕೇಳಿ ಅನಂತರ ಮರೆತು ಬಿಡುವ ವಿಷಯವಾಗಿರುವದಿಲ್ಲ. ಅದಕ್ಕೆ ಒಂದು ಪ್ರತಿಕ್ರಿಯೆ ಬೇಕಾಗಿರುತ್ತದೆ. ಯೋಹಾನನ ಪ್ರಶ್ನೆಯು ತಪ್ಪಿಸಿಕೊಳ್ಳಲಾರದಂಥದ್ದಾಗಿದೆ: ನೀನು ನಂಬಿಕೆಯಲ್ಲಿ ಹೆಜ್ಜೆಯಿಟ್ಟು ನಿನಗಾಗಿ ಮರಣ ಹೊಂದಿದಾತನೊಂದಿಗೆ ಗುರುತಿಸಿಕೊಳ್ಳುವಿಯೋ? ಯೇಸುವು ನಿನಗಾಗಿ ಮರಣ ಹೊಂದಿದನು ನೀನು ಅದರ ಬಗ್ಗೆ ಏನು ಮಾಡುತ್ತಿ?

---

ಟಿಪ್ಪಣಿ

[1]ಯೋಸೇಫನು ಐಶ್ವರ್ಯವಂತನೂ ಯೆಹೂದಿ ಸನ್ಹೆದ್ರಿನ್ ಸಭೆಯ ಸದಸ್ಯನಾಗಿದ್ದವನು, ಯೇಸುವಿನ ದೇಹಕ್ಕಾಗಿ ಪಿಲಾತನನ್ನು ಕೇಳಲು "ಧೈರ್ಯಗೊಂಡನು" ಎಂದು ಮಾರ್ಕ 15:43 ಸೂಚಿಸುತ್ತದೆ.